ಎಂ ವಿ ಸಿ ನಂ.1466/2022
ಆರ್.ಡಬ್ಲು- 2

ದಿನಾಂಕಃ 28-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎದುರುದಾರರ ನಂ.4 ಪರ ಶ್ರೀ. ಎ ಎನ್ ಐ ವಕೀಲರಿಂದ.**

ನಾನು ನನ್ನ ಮುಖ್ಯ ವಿಚಾರಣೆಯ ಭಾಗಾಂಶವಾಗಿ ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸರಿಯಾಗಿರುತ್ತವೆ.

ನನಗೆ ಸಾಕ್ಷ್ಯ ನೀಡಲು ನಮ್ಮ ಸಂಸ್ಥೆಯವರು ನೀಡಿದ ಅಧಿಕಾರ ಪತ್ರ ಮತ್ತು ನನ್ನ ಗುರುತಿನ ಚೀಟಿಯ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಆರ್-3 ಮತ್ತು ನಿಆರ್-4 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯನ್ನು ವಜಾ ಮಾಡಬೇಕೆಂದು ವಿನಂತಿಸುತ್ತೇನೆ.

**ಪಾಟೀಸವಾಲುಃ-ಅರ್ಜಿದಾರರ ಪರ ಶ್ರೀ. ಎಮ್ ಟಿ ಹೆಚ್ ವಕೀಲರಿಂದ**.

ಅಪರಾಧ ಬಸ್ಸನ್ನು ನಾನೇ ಚಲಾವಣೆ ಮಾಡುತ್ತಿದ್ದೆ ಎಂದರೆ ಸರಿ. ನಿಪಿ-13 ಬಸ್ಸಿನ ಟಿಕೇಟ್ ನಮ್ಮ ಬಸ್ಸಿನದು ಎಂದರೆ ಸರಿ. ಅಪಘಾತ ಆದ ದಿನಾಂಕದಂದು ಅರ್ಜಿದಾರರು ನಮ್ಮ ಬಸ್ಸಿನಲ್ಲಿಯೇ ಪ್ರಯಾಣಿಸುತ್ತಿದ್ದರು ಎಂದರೆ ಸರಿ. ಅರ್ಜಿದಾರರಿಗೆ ಅಪಘಾತದಿಂದ ಗಾಯವಾಗಿರುತ್ತವೆ ಎಂದರೆ ಸರಿ. ನಮ್ಮ ಸಂಸ್ಥೆಯವರು ಅರ್ಜಿದಾರರಿಗೆ ಪರಿಹಾರ ನೀಡುವ ಹೊಣೆಗಾರಿಕೆ ಹೊಂದಿರುತ್ತಾರೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ-ಎದುರುದಾರ ನಂ.3 ಪರ ಶ್ರೀ. ಎನ್ ಡಿ ವಕೀಲರಿಂದ</u>.**

ಅಪಘಾತವು ಮಾಗಡಿ ಹತ್ತಿರ ಆಗಿರುತ್ತದೆ ಎಂದರೆ ಸರಿ. ಗೂಡ್ಸ ವಾಹನವು ರಸ್ತೆಯ ಎಡಭಾಗದಲ್ಲಿ ನಿಂತಿತ್ತು ಎಂದರೆ ಸರಿ. ಅಪಘಾತ ಸ್ಥಳದ ರಸ್ತೆ ಸಮಪಾತದಲ್ಲಿ ಇರುತ್ತದೆ ಎಂದರೆ ಸರಿ. ಗಾಡಿ ನಿಂತಿದ್ದಾಗ ಸಾಕಷ್ಟು ಅಂತರ ಬಿಟ್ಟು ವಾಹನಗಳನ್ನು ಪಾಸ್ ಮಾಡಿಕೊಳ್ಳುತ್ತೇವೆ ಎಂದರೆ ಸರಿ. ಗೂಡ್ಸ ವಾಹನ ನಿಂತ ಭಾಗದಿಂದ 10 ಪೂಟು ಅಂತರದವರೆಗೆ ಮುಂದಕ್ಕೆ ಚಲಿಸಿತ್ತು. ನಿಂತ ಜಾಗದಿಂದ ವಾಹನವನ್ನು ಮುಂದಕ್ಕೆ ಚಲಾಯಿಸಲು ಸಾವಕಾಶವಾಗಿ ಚಲಾಯಿಸಬೇಕಾಗುತ್ತದೆ ಎಂದರೆ ಸರಿ. ನಮ್ಮ ಬಸ್ಸು ಗೂಡ್ಸ ವಾಹನದ ಹಿಂದೆ ಹಾಯಿಸಿ ಅಪಘಾತಪಡಿಸಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷ್ಯ ನುಡಿಯುವ ಪೂರ್ವದಲ್ಲಿ ಅಪಘಾತಕ್ಕೆ ಸಂಬಂಧಿಸಿದ ಪೊಲೀಸು ದಾಖಲೆಗಳನ್ನು ನೋಡಿರುತ್ತೇನೆ. ಪೊಲೀಸು ಪಿರ್ಯಾದಿಯಲ್ಲಿ ನಮ್ಮ ಬಸ್ಸು ಗೂಡ್ಸ ವಾಹನದ ಹಿಂದಿನ ಭಾಗಕ್ಕೆ ಡಿಕ್ಕಿಪಡಿಸಿ ಅಪಘಾತಪಡಿಸಿರುತ್ತದೆ ಎಂದು ಹೇಳಲಾಗಿರುತ್ತದೆ ಎಂದರೆ ಸುಳ್ಳು. ಪೊಲೀಸು ದಾಖಲೆಗಳು ಸುಳ್ಳು ಎಂದು ನನ್ನ ಸಾಕ್ಷ್ಯದಲ್ಲಿ ಎಲ್ಲಿಯೂ ಹೇಳಿಲ್ಲ. ಮೋಟಾರು ವಾಹನ ಪರೀಕ್ಷಾ ವರದಿಯಲ್ಲಿ ಬಸ್ಸು ಗೂಡ್ಸ ವಾಹನದ ಹಿಂದುಗಡೆ ಹಾಯಿಸಿ ಜಕಂಗೊಳಿಸಿರುವುದಾಗಿ ತಿಳಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಿಂತ ವಾಹನವು ಒಮ್ಮೆಗೆ ಸ್ಪಿಡಾಗಿ ಚಲಾಯಿಸಲು ಬರುವುದಿಲ್ಲ ಎಂದರೆ ಸರಿ. ಅಪಘಾತವು ನನ್ನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ ನಮ್ಮ ಸಂಸ್ಥೆಯವರು ಮಾತ್ರ ಅರ್ಜಿದಾರರಿಗೆ ಪರಿಹಾರ ನೀಡುವ ಹೊಣೆಗಾರಿಕೆ ಹೊಂದಿರುತ್ತೇವೆ ಎಂದರೆ ಸರಿಯಲ್ಲ. ಗೂಡ್ಸ ವಾಹನದ ಚಾಲಕನ ಏನು ತಪ್ಪು ಇಲ್ಲದೇ ಇದ್ದರೂ ಸಹ ಪೊಲೀಸರೊಂದಿಗೆ ಸಂಗನಮತ ಮಾಡಿಕೊಂಡು ಆತನ ವಿರುದ್ಧ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಅಪಘಾತವಾದಾಗ ಇಲಾಖಾ ತನಿಖೆ ಕೈಗೊಳ್ಳಲಾಗುತ್ತದೆ ಎಂದರೆ ಸರಿ. ಆ ಇಲಾಖಾ ತನಿಖೆ ನನ್ನ ಪರವಾಗಿ ಬರಬೇಕು

ಎಂದು ನಾನು ಈಗ ನ್ಯಾಯಾಲಯಕ್ಕೆ ಹಾಜರಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ನಂತರ ರಸ್ತೆಯ ಎಡಭಾಗದ ತಗ್ಗಿನಲ್ಲಿ ಬಸ್ಸ ಪಲ್ಟಿ ಆಗಿತ್ತು ಎಂದರೆ ಸರಿ. ಅಪಘಾತವು ಮಾಗಡಿಯಿಂದ 2 ಕೀ.ಮೀ. ಅಂತರದಲ್ಲಿ ಆಗಿರುತ್ತದೆ ಎಂದರೆ ಸರಿ. ಗೂಡ್ಸ ವಾಹನವು ಅಪಘಾತವಾದ ನಂತರ ಸಹ ಅಲ್ಲಿಯೇ ರಸ್ತೆಯ ಪಕ್ಕ ನಿಂತಿತ್ತು ಎಂದರೆ ಸರಿ. ಅಪಘಾತವು ನನ್ನ ತಪ್ಪಿನಿಂದ ಆಗಿ ಬಸ್ಸನ್ನು ತೆಗ್ಗಿನಲ್ಲಿ ಕೆಡುವುವಂತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).